### ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎ.ಸಿ. ಭಂಡಾರಿ ಭರವಸೆ

# ಪದವಿ ತರಗತಿಗೆ ಶೈಕ್ಷಣಿಕ ಪಠ್ಯವಾಗಿ ತುಳು ಸೇರ್ಪಡೆ

**ಕಾರ್ಕಳ:** ಭಾಷೆಯನ್ನು ಹೊರತುಪಡಿಸಿ ಯಾವುದೇ ಸಂಸ್ಕೃತಿ ಉಳಿಯದು. ಅವೆರಡೂ ಒಂದೇ ನಾಣ್ಯದ ಎರಡು ಮುಖಗಳಂತೆ. ತುಳುವರ ಸಂಸ್ಕೃತಿ ಉಳಿಯಬೇಕಾದರೆ ತುಳು ಭಾಷೆ ಉಳಿಯಬೇಕಾಗಿದೆ ಎಂದು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎ.ಸಿ. ಭಂಡಾರಿ ಹೇಳಿದ್ದಾರೆ

ಅವರು ಮಂಜುನಾಥ ಪೈ ಸ್ಮಾರಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ತುಳು ಸಾಹಿತ್ಯ ಅಕಾಡೆಮಿಯ ಸಹಯೋಗದಲ್ಲಿ ನಡೆದ ತುಳು ಸಾಹಿತ್ಯ ಪರಂಪರೆ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ತುಳು ಭಾಷೆಗಿರುವ ಪ್ರಾಚೀನತೆ, ತುಳುವಿನಲ್ಲಿರುವ ಪ್ರಾಚೀನ ಸಾಹಿತ್ಯಗಳ ಅರಿವು ಇಂದಿನ ಯುವ ಜನತೆಗೆ ಆಗಬೇಕಾಗಿದೆ. ಇದೀಗ ತುಳುವನ್ನು ಪದವಿ ತರಗತಿಗಳಿಗೆ ಶೈಕ್ಷಣಿಕ ಪಠ್ಯವಾಗಿ ಸೇರ್ಪಡೆಗೆ ಸಿದ್ಧತೆಗಳಾಗುತ್ತಿದ್ದು ಮುಂದಿನ ದಿನಗಳಲ್ಲಿ ಪದವಿಯಲ್ಲಿ ತುಳುವನ್ನು ಐಚ್ಛಿಕವಾಗಿ ಕಲಿಯಬಹುದಾಗಿದೆ. ಈ ಮೂಲಕ ಶೈಕ್ಷಣಿಕವಾಗಿಯೂ ತುಳು ಮುನ್ನೆಲೆಗೆ ಬರಲಿದೆ ಎಂದರು.

ಸಂಕಿರಣದಲ್ಲಿ ತುಳುವಿನ ಪ್ರಾಚೀನ ಸಾಹಿತ್ಯದ ಬಗ್ಗೆ ಮಂಗಳೂರು ವಿ.ವಿ. ಪ್ರಾಧ್ಯಾಪಕ ಡಾ. ಧನಂಜಯ ಕುಂಬಳೆ, ತುಳು ಲಿಪಿಯ ಬಗ್ಗೆ ಧರ್ಮಸ್ಥಳದ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನದ ನಿರ್ದೇಶಕ ಡಾ. ಎಸ್. ಆರ್ ವಿಘ್ನರಾಜ ಮತ್ತು ಆಧುನಿಕ ತುಳು ಸಾಹಿತ್ಯದ ಬಗ್ಗೆ ಮಂಗಳೂರಿನ ರಘು ಇಡ್ಕಿದು ಉಪನ್ಯಾಸ ನೀಡಿದರು.

ತುಳು ಸಾಹಿತಿ ಮಸುಮ ಸಮಾರೋಪ ಭಾಷಣ ಮಾಡಿದರು. ಶಿವರಾಮ ಕಾರಂತ ಪುರಸ್ಕಾರ ಪಡೆದ ಸಾಹಿತಿ ಮಸುಮ ಅವರನ್ನು ಸನ್ಮಾನಿಸಲಾಯಿತು. ಪ್ರಾಂಶುಪಾಲ ಪ್ರೊ. ಶ್ರೀವರ್ಮ ಅಜ್ರಿ ಅಧ್ಯಕ್ಷತೆ ವಹಿಸಿದ್ದರು. ಪ್ರಾಧ್ಯಾಪಕ ಡಾ. ವರದರಾಜ ಚಂದ್ರಗಿರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಾಧ್ಯಾಪಕಿ ಜ್ಯೋತಿ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು. ಪ್ರಶಾಂತ ಆಚಾರ್ಯ ವಂದಿಸಿದರು.



ವಿಚಾರ ಸಂಕಿರಣ ಉದ್ಘಾಟನೆ

- ತುಳುವಿನ ಪ್ರಾಚೀನ ಸಾಹಿತ್ಯದ ಬಗ್ಗೆ ಮಂಗಳೂರು ವಿ.ವಿ. ಪ್ರಾಧ್ಯಾಪಕ ಡಾ. ಧನಂಜಯ ಕುಂಬಳೆ ಅವರಿಂದ ಉಪನ್ಯಾಸ
- ತುಳು ಲಿಪಿಯ ಬಗ್ಗೆ ಧರ್ಮಸ್ಥಳದ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನದ ನಿರ್ದೇಶಕ ಡಾ. ಎಸ್. ಆರ್ ವಿಘ್ನರಾಜ ಅವರಿಂದ ಮಾಹಿತಿ
- ವಿವಿಧ ಗಣ್ಯರ ಉಪಸ್ಥಿತಿ

### “ ತುಳು ಭಾಷೆ ಮುನ್ನೆಲೆಗೆ

ಭಾಷೆಯನ್ನು ಹೊರತುಪಡಿಸಿ ಯಾವುದೇ ಸಂಸ್ಕೃತಿ ಉಳಿಯದು. ಅವೆರಡೂ ಒಂದೇ ನಾಣ್ಯದ ಎರಡು ಮುಖಗಳಂತೆ. ತುಳುವರ ಸಂಸ್ಕೃತಿ ಉಳಿಯಬೇಕಾದರೆ ತುಳು ಭಾಷೆ ಉಳಿಯಬೇಕಾಗಿದೆ. ತುಳು ಭಾಷೆಗಿರುವ ಪ್ರಾಚೀನತೆ, ತುಳುವಿನಲ್ಲಿರುವ ಪ್ರಾಚೀನ ಸಾಹಿತ್ಯಗಳ ಅರಿವು ಇಂದಿನ ಯುವ ಜನತೆಗೆ ಆಗಬೇಕಾಗಿದೆ. ಇದೀಗ ತುಳುವನ್ನು ಪದವಿ ತರಗತಿಗಳಿಗೆ ಶೈಕ್ಷಣಿಕ ಪಠ್ಯವಾಗಿ ಸೇರ್ಪಡೆಗೆ ಸಿದ್ಧತೆಗಳಾಗುತ್ತಿದ್ದು ಮುಂದಿನ ದಿನಗಳಲ್ಲಿ ಪದವಿಯಲ್ಲಿ ತುಳುವನ್ನು ಐಚ್ಛಿಕವಾಗಿ ಕಲಿಯಬಹುದಾಗಿದೆ. ಈ ಮೂಲಕ ಶೈಕ್ಷಣಿಕವಾಗಿಯೂ ತುಳು ಮುನ್ನೆಲೆಗೆ ಬರಲಿದೆ.

■ ಎ.ಸಿ. ಭಂಡಾರಿ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ